# PRAYER 316

## ನಾನು ಹೇಗೆ ಪ್ರಾರ್ಥಿಸಬೇಕು?

**ನಾನು ಹೇಗೆ ಪ್ರಾರ್ಥಿಸಬೇಕು?** ಪ್ರಾರ್ಥನೆಯು ದೇವರೊಂದಿಗೆ ಮಾತನಾಡುವುದಾಗಿದೆ. ಸತ್ಯವೇದವು ದೇವರು ನಮ್ಮೊಂದಿಗೆ ಮಾತನಾಡುವುದಾಗಿದೆ. ಪ್ರಾರ್ಥನೆಯ ಬಗ್ಗೆ ಸತ್ಯವೇದವು ನಮಗೆ ಏನನ್ನು ಕಲಿಸಿಕೊಡುತ್ತದೆ ಎಂಬುದನ್ನು ಕಲಿಯಿರಿ. *"ಆತನು [ಯೇಸು] ಒಂದಾನೊಂದು ಸ್ಥಳದಲ್ಲಿ ಪ್ರಾರ್ಥನೆಮಾಡಿ ಮುಗಿಸಿದಾಗ ಆತನ ಶಿಷ್ಯರಲ್ಲಿ ಒಬ್ಬನು ಆತನಿಗೆ - ಸ್ವಾಮೀ, ಯೋಹಾನನು ತನ್ನ ಶಿಷ್ಯರಿಗೆ ಕಲಿಸಿದ ಹಾಗೆ ನಮಗೂ ಪ್ರಾರ್ಥನೆಮಾಡುವದನ್ನು ಕಲಿಸು ಎಂದು ಕೇಳಿದನು."* ಲೂಕ 11:1. ಅದೇ ಪ್ರಾರ್ಥನೆಯನ್ನು ಮಾಡಿರಿ. ಸತ್ಯವೇದವು ಪ್ರಾರ್ಥನೆ ಕುರಿತಾಗಿ ಸ್ತುತಿ, ಕೃತಜ್ಞತೆ, ಅರಿಕೆ, ಮತ್ತು ಮನವಿಗಳನ್ನು ಅರ್ಪಿಸುವ ಬೋಧನೆಯನ್ನು ಒಳಗೊಂಡಿದೆ. ಸ್ತುತಿಯು ದೇವರನ್ನು ಘನಪಡಿಸುತ್ತದೆ, ಗೌರವಿಸುತ್ತದೆ, ಮತ್ತು ಮಹಿಮೆಪಡಿಸುತ್ತದೆ, ಕೀರ್ತನೆ 34:1-3. *"ನಾನು ಯೆಹೋವನನ್ನು ಎಡೆಬಿಡದೆ ಕೊಂಡಾಡುವೆನು,"* ಇಬ್ರಿಯ 13:15. ಆತನು ಮಾಡಿರುವ ಕಾರ್ಯಗಳಿಗಾಗಿ ಕೃತಜ್ಞತೆಯನ್ನು ಸಲ್ಲಿಸುವುದು. *"ನಿನ್ನ ನಾಮವನ್ನು ಸಂಕೀರ್ತಿಸುವದೂ ಯುಕ್ತವಾಗಿದೆ."* ಕೀರ್ತನೆ 92:1. ನಮ್ಮ ಪಾಪಗಳ ನಿಮಿತ್ತವಾಗಿ ಅರಿಕೆಮಾಡುವುದು. *"ನಮ್ಮ ಪಾಪಗಳನ್ನು ಒಪ್ಪಿಕೊಂಡು ಅರಿಕೆಮಾಡಿದರೆ ಆತನು ನಂಬಿಗಸ್ತನೂ ನೀತಿವಂತನೂ ಆಗಿರುವದರಿಂದ ನಮ್ಮ ಪಾಪಗಳನ್ನು ಕ್ಷಮಿಸಿಬಿಟ್ಟು ಸಕಲ ಅನೀತಿಯನ್ನು ಪರಿಹರಿಸಿ ನಮ್ಮನ್ನು ಶುದ್ಧಿಮಾಡುವನು."* 1 ಯೋಹಾನ 1:9. "ನಿಮಗೆ ಬೇಕಾದದ್ದನು ಆತನಿಗೆ ತಿಳಿಯಪಡಿಸಿರಿ ಯಾಕಂದರೆ ಆತನಲ್ಲಿ ಬೇಡಿಕೊಳ್ಳುವಂತೆ ಆತನು ನಿಮ್ಮನ್ನು ಆಹ್ವಾನಿಸುತ್ತಾನೆ. *"ಪ್ರಾರ್ಥನೆ ವಿಜ್ಞಾಪನೆಗಳನ್ನೂ ಮಾಡುತ್ತಾ ನಿಮಗೆ ಬೇಕಾದದ್ದನ್ನು ತಿಳಿಯಪಡಿಸಿರಿ."* ಫಿಲಿಪ್ಪಿಯವರಿಗೆ 4:6. ಮತ್ತಾಯ 6:9-13 ರ ಪರಲೋಕದ ಪ್ರಾರ್ಥನೆಯಲ್ಲಿ ತಿಳಿಸಿರುವಂತೆ ನಿಮ್ಮ ಆತ್ಮೀಕ ಮತ್ತು ಶಾರೀರಿಕ ಅಗತ್ಯತೆಗಳನ್ನು ಪೂರೈಸುವಂತೆ ದೇವರನ್ನು ಬೇಡಿಕೊಳ್ಳಿರಿ. ಪ್ರಾರ್ಥನೆಯು ಜೀವವುಳ್ಳ ದೇವರೊಂದಿಗೆ ಮಾತನಾಡಲು ನಿಮಗೆ ಸಿಕ್ಕ ವಿಶೇಷ ಸೌಭಾಗ್ಯ ಮತ್ತು ಸದಾವಕಾಶವಾಗಿದೆ. *"ಯೆಹೋವನು ನೀತಿವಂತರನ್ನು ಕಟಾಕ್ಷಿಸುತ್ತಾನೆ; ಅವರು ಮೊರೆಯಿಡುವಾಗ ಕಿವಿಗೊಡುತ್ತಾನೆ."* ಕೀರ್ತನೆ 34:15. *"ಇದರಿಂದ ಭಕ್ತರೆಲ್ಲರು ಸಕಾಲದಲ್ಲಿ ನಿನ್ನನ್ನು ಪ್ರಾರ್ಥಿಸಲಿ,"* ಕೀರ್ತನೆ 32:6.

**ನಾನು ಎಲ್ಲಿ ಪ್ರಾರ್ಥಿಸಬೇಕು?** ಧಾರ್ಮಿಕ ಕಟ್ಟಡಗಳಲ್ಲಿ ಮತ್ತು ಕೂಟಗಳಲ್ಲಿ ಪ್ರಾರ್ಥಿಸುವುದು ಉತ್ತಮ. ಆದಾಗ್ಯೂ, ಯೇಸು ಹೀಗೆ ಹೇಳಿದನು, *"ದೇವರು ಆತ್ಮಸ್ವರೂಪನು; ಆತನನ್ನು ಆರಾಧಿಸುವವರು ಆತ್ಮೀಯ ರೀತಿಯಲ್ಲಿ ಸತ್ಯಕ್ಕೆ ತಕ್ಕ ಹಾಗೆ ಆರಾಧಿಸಬೇಕು ಅಂದನು."* ಯೋಹಾನ 4:24. ಪರಿಣಾಮಕಾರಿಯಾದ ಪ್ರಾರ್ಥನೆಯು ನೀವು ಇರುವ ಸ್ಥಳದ ಮೇಲೆ ಆಧಾರಿತವಾಗಿರುವುದಿಲ್ಲ. ಯೇಸು ಹೀಗೆ ಹೇಳಿದನು, *"ಮತ್ತು ನೀವು ಪ್ರಾರ್ಥನೆಮಾಡುವಾಗ ಕಪಟಿಗಳ ಹಾಗೆ ಮಾಡಬೇಡಿರಿ. ಜನರು ನೋಡಬೇಕೆಂದು ಅವರು ಸಭಾಮಂದಿರಗಳಲ್ಲಿಯೂ ಬೀದೀಚೌಕಗಳಲ್ಲಿಯೂ ನಿಂತುಕೊಂಡು ಪ್ರಾರ್ಥನೆಮಾಡುವದಕ್ಕೆ ಇಷ್ಟಪಡುತ್ತಾರೆ. ಅವರು ತಮಗೆ ಬರತಕ್ಕ ಫಲವನ್ನು ಹೊಂದಿದ್ದಾಯಿತೆಂದು ನಿಮಗೆ ಸತ್ಯವಾಗಿ ಹೇಳುತ್ತೇನೆ. ಆದರೆ ನೀನು ಪ್ರಾರ್ಥನೆಮಾಡಬೇಕಾದರೆ ನಿನ್ನ ಏಕಾಂತವಾದ ಕೋಣೆಯೊಳಗೆ ಹೋಗಿ ಬಾಗಲನ್ನು ಮುಚ್ಚಿಕೊಂಡು ಅಂತರಂಗದಲ್ಲಿಯೂ ಇರುವ ನಿನ್ನ ತಂದೆಗೆ ಪ್ರಾರ್ಥನೆಮಾಡು; ಅಂತರಂಗದಲ್ಲಿ ನಡೆಯುವದನ್ನು ನೋಡುವ ನಿನ್ನ ತಂದೆಯು ನಿನಗೆ ಫಲಕೊಡುವನು."* ಮತ್ತಾಯ 6:5-6. ಪರಿಣಾಮಕಾರಿಯ ಪ್ರಾರ್ಥನೆಯು ನೀವು ಎಲ್ಲಿ ಪ್ರಾರ್ಥಿಸುತ್ತೀರಿ ಎಂಬುದರ ಮೇಲೆ ಆಧಾರಿತವಾಗಿರುವುದಿಲ್ಲ. ಅದು ನಿಮ್ಮ ಹೃದಯದ ಸ್ಥಿತಿಯ ಮೇಲೆ ಆಧಾರಿತವಾಗಿರುತ್ತದೆ. ಬಹಿರಂಗವಾಗಿ ಪ್ರಾರ್ಥಿಸಿರಿ. ರಹಸ್ಯವಾಗಿ ಪ್ರಾರ್ಥಿಸಿರಿ.

**ನನ್ನ ಮೊಣಕಾಲುಗಳಲ್ಲಿ ನಾನು ಪ್ರಾರ್ಥಿಸಬೇಕೋ?** ಯೇಸು, ಪೌಲ, ಮತ್ತು ದಾನಿಯೇಲನು ಹಾಗೆ ಮಾಡಿದರು, ಲೂಕ 22:41, ಅಪೊಸ್ತಲರ ಕೃತ್ಯಗಳು 20:36, ಮತ್ತು ದಾನಿಯೇಲ 6:10. ನಿಮ್ಮ ಮೊಣಕಾಲುಗಳಲ್ಲಿ ಪ್ರಾರ್ಥಿಸಿರಿ. ಆದಾಗ್ಯೂ, ಸತ್ಯವೇದದಲ್ಲಿ ಇನ್ನೂ ಕೆಲವರು, ನಿಂತುಕೊಂಡರು, ಆಕಾಶದ ಕಡೆಗೆ ಕಣ್ಣೆತ್ತಿ ನೋಡಿದರು, ಅವರ ಕೈಗಳನ್ನು ಚಾಚಿದರು ಅಥವಾ ಮೇಲಕ್ಕೆತ್ತಿದ್ದರು, ನೆಲದಲ್ಲಿ ಅಡ್ಡಬಿದ್ದರು, ಮತ್ತು ಗೋಡೆಗೆ ಮುಖ ಮಾಡಿದರು. ಈ ರೀತಿಯಾದ ದೇಹದ ಸ್ಥಿತಿಯು ನಿಮ್ಮ ಹೃದಯದ ಮನೋಭಾವವನ್ನು ವಿವರಿಸುವಾಗ ಮಾತ್ರ ಪ್ರಾರ್ಥನೆಗೆ ಅರ್ಥವನ್ನು ನೀಡುತ್ತದೆ.

**ನಾನು ಹೇಗೆ ಪ್ರಾರ್ಥಿಸಬೇಕು?** *ಹೇಗೆ* ಪ್ರಾರ್ಥಿಸುವುದು ಎಂಬುದು ಪ್ರಾಮುಖ್ಯವಾಗಿದೆ, ಅಥವಾ *ಯಾವುದಕ್ಕಾಗಿ* ಪ್ರಾರ್ಥಿಸಬೇಕು ಎಂಬುದಕ್ಕಿಂತ ಹೆಚ್ಚು ಪ್ರಾಮುಖ್ಯವಾಗಿದೆ, ಸತ್ಯವೇದಕ್ಕೆ ಅನುಸಾರವಾಗಿ ಮಾಡುವ ಪ್ರಾರ್ಥನೆಯು ತೆರದ ಹಾಗೂ ಪ್ರಾಮಾಣಿಕ ಹೃದಯದಿಂದ ಮಾಡುವುದಾಗಿದೆ. ಪ್ರಾರ್ಥನೆ ಮಾಡಲು ಯಾವುದೇ ವಿಶೇಷ ಪದಗಳ ಸಂಯೋಜನೆ, ಹೇಳಿಕೆಗಳು, ಅಥವಾ ಸಾಲುಗಳಿಲ್ಲ, ಅಥವಾ ನೀವು ಆತನಲ್ಲಿ ಬೇಡಿಕೊಳ್ಳುವುದನ್ನು ಒತ್ತಾಯವಾಗಿ ದೇವರು ಕೊಡುವಂತೆ ಕೇಳುವುದಲ್ಲ. ಪ್ರಾರ್ಥನೆಯಲ್ಲಿ ಒಳಗೊಂಡಿರುವ ಬಗ್ಗೆ ಸತ್ಯವೇದವು ಕೆಲವು ಸೂಚನೆಗಳು ಮತ್ತು ಉದಾಹರಣೆಗಳನ್ನು ನೀಡುತ್ತದೆ:

ಎಲ್ಲಾದರಲ್ಲಿಯೂ ಕೃತಜ್ಞತಾಸ್ತುತಿಮಾಡಿರಿ, 1 ಥೆಸಲೋನಿಕದವರಿಗೆ 5:18.

ಭಕ್ತಿಯಿಂದ, ತುಟಿಯಿಂದಲ್ಲ, ಯೆಶಾಯ 29:13.

ಅಜ್ಞಾನಿಗಳ ಹಾಗೆ ಹೇಳಿದ್ದನ್ನೇ ಹೇಳುವುದು, ಮತ್ತಾಯ 6:7.

ತೆರೆದವರಾಗಿ, ನೇರವಾಗಿ, ಮತ್ತು ಪ್ರಾಮಾಣಿಕವಾಗಿ, ಯೆಶಾಯ 37:14-17.

ಭಕ್ತಿಯಿಂದಲೂ ಮತ್ತು ತಪ್ಪದೆ, ಕೊಲೊಸ್ಸೆಯವರಿಗೆ 4:2, ಲೂಕ 11:5-10, 18:1-8.

ಯಾವಾಗಲೂ, ಎಡೆಬಿಡದೆ, 1 ಥೆಸಲೋನಿಕದವರಿಗೆ 5:17.

ಬಲೀಯವಾಗಿ, ರೋಮಾಪುರದವರಿಗೆ 15:30.

ಇತರ ಸಹೋದರರೊಂದಿಗೆ ಒಂದೇ ಮನಸ್ಸುಳ್ಳವರಾಗಿ, ಮತ್ತಾಯ 18:19-20, 1 ತಿಮೊಥೆಯವರಿಗೆ 2:8.

ಶ್ರೇಷ್ಠವಾದ ನಂಬಿಕೆಯಿಂದ, ಯಾಕೋಬ 1:6-7, ಇಬ್ರಿಯ 11:6.

ದೇವರ ಚಿತ್ತಕ್ಕೆ ಅನುಸಾರವಾಗಿ, ಯೋಹಾನ 15:7, 1 ಯೋಹಾನ 5:14-15.

ಯೇಸುವಿನ ಹೆಸರಿನಲ್ಲಿ, ಆತನ ಪ್ರತಿನಿಧಿಗಳಾಗಿ ಆತನ ಚಿತ್ತದಲ್ಲಿ, ಯೋಹಾನ 14:13, 15:16.

**ನಾನು ಯಾವುದಕ್ಕಾಗಿ ಪ್ರಾರ್ಥಿಸಬೇಕು?** ಪರಲೋಕದ ಪ್ರಾರ್ಥನೆಯಲ್ಲಿ, ಯೇಸು ಕ್ರಿಸ್ತನು ತನ್ನ ಶಿಷ್ಯರಿಗೆ ಅವರ ದೈನಂದಿನ ಶಾರೀರಿಕ ಮತ್ತು ಆತ್ಮೀಕ ಅಗತ್ಯಗಳಿಗಾಗಿ ಪ್ರಾರ್ಥಿಸಲು ಕಲಿಸಿಕೊಟ್ಟನು. ಯೋಹಾನ 17 ರ ತನ್ನ ಪ್ರಾರ್ಥನೆಯಲ್ಲಿ, ಯೇಸು ತನಗಾಗಿ, ಶಿಷ್ಯರಿಗಾಗಿ, ಮತ್ತು ಲೋಕಕ್ಕಾಗಿ ಪ್ರಾರ್ಥಿಸಿದನು. ನಂಬಿಗಸ್ತಿಕೆಯಿಂದ, ತನ್ನ ಚಿತ್ತಕ್ಕೆ ಒಳಪಟ್ಟು, ತಂದೆಗೆ ಅರ್ಪಿಸಿ, ತನ್ನ ಹೆಸರಿನಲ್ಲಿ ಪ್ರಾರ್ಥನೆ ಮಾಡುವವರಿಗೆ ಉತ್ತರವನ್ನು ನೀಡುವುದಾಗಿ ಯೇಸು ವಾಗ್ದಾನ ಮಾಡಿದನು, ಯೋಹಾನ 15:7, 16, 16:23, 1 ಯೋಹಾನ 5:14-15. ನೀವು ಯಾವುದಕ್ಕಾಗಿ ಪ್ರಾರ್ಥಿಸಬೇಕು ಎಂಬುದಕ್ಕೆ ಇತರೆ ಸತ್ಯವೇದದ ಸೂಚನೆಗಳು ಮತ್ತು ಉದಾಹರಣೆಗಳು ಇವುಗಳನ್ನು ಒಳಗೊಂಡಿದೆ:

ಜ್ಞಾನಕ್ಕಾಗಿ, ಯಾಕೋಬ 1:5, 2 ಪೂರ್ವಕಾಲವೃತ್ತಾಂತ 1:7-12.
ದೇವಜ್ಞಾನದ ಅಭಿವೃದ್ಧಿಗಾಗಿ, ಕೊಲೊಸ್ಸೆಯವರಿಗೆ 1:9-12.
ನಿಮ್ಮನ್ನು ಬೈಯುವವರಿಗೋಸ್ಕರ, ಲೂಕ 6:28.
ಸ್ವಸ್ಥತೆ, ಸಾಧ್ಯವಿದೆ, ಯಾಕೋಬ 5:14-15, ಆದರೆ ಎಲ್ಲರಿಗೂ ಅಲ್ಲ, 2 ಕೊರಿಂಥದವರಿಗೆ 12:7-9.
ಒಬ್ಬರಿಗೋಸ್ಕರ ಒಬ್ಬರು, ಎಫೆಸದವರಿಗೆ 6:18, ಯಾಕೋಬ 5:16.
ಅಧಿಕಾರಿಗಳಿಗಾಗಿ, 1 ತಿಮೊಥೆಯವರಿಗೆ 2:1-2.
ನಿಮ್ಮ ಆಹಾರಕ್ಕಾಗಿ, ಮತ್ತಾಯ 6:11, ಮಾರ್ಕ 6:41, 8:6-7.
ಕ್ರಿಸ್ತನ ಅಗತ್ಯವಿರುವವರಿಗಾಗಿ, ರೋಮಾಪುರದವರಿಗೆ 10:1.
ಸುವಾರ್ತೆ ಸಾರುವ ಕೆಲಸಗಾರರಿಗಾಗಿ,ಮತ್ತಾಯ 9:37-38.
ಸುವಾರ್ತೆಗೆ ಅನುಕೂಲವಾದ ಸಂದರ್ಭಕ್ಕಾಗಿ, ಕೊಲೊಸ್ಸೆ 4:3-4.

**ದೇವರು ನಿಮ್ಮ ಪ್ರಾರ್ಥನೆಯನ್ನು ಕೇಳುತ್ತಾನೆ ಮತ್ತು ಉತ್ತರಿಸುತ್ತಾನೆ.** ಪ್ರಾರ್ಥನೆಗಾಗಿ ದೇವರು ಹೊಂದಿರುವ ಷರತ್ತುಗಳನ್ನು ಪೂರೈಸಿರಿ ಮತ್ತು ಆತನು ನಿಮಗೆ ಉತ್ತರಿಸುತ್ತಾನೆ. ದೇವರ ಉತ್ತರವು ಒಂದು *ಹೌದು*, ಒಂದು *ತಡವಾಗಿ ಹೌದೆನ್ನ*ಬಹುದು,ಅಥವಾ ಒಂದು ಇಲ್ಲ ಎನ್ನಬಹುದು. ನೀವು ಕೇಳುವುದಕ್ಕಿಂತಲೂ ಅಥವಾ ಊಹಿಸುವುದಕ್ಕಿಂತಲೂ ಹೆಚ್ಚಾಗಿ ಆತನು ನಿಮಗೆ ಕೊಡಬಹುದು, ಎಫೆಸದವರಿಗೆ 3:20. ತಡವಾಗಿ ದೇವರು ಉತ್ತರಿಸಲು ಹೌದೆನ್ನುವಾಗ ನಿಮ್ಮನ್ನು ಬಲಪಡಿಸಲು ಅಥವಾ ಇತರರನ್ನು ಬಲಪಡಿಸಲು ಆಗಿರಬಹುದು. ಅಥವಾ ಆತನ ಉತ್ತರವು ಅಂತಿಮವಾಗಿ ಇಲ್ಲ ಎನ್ನಬಹುದು. ಆತನಲ್ಲಿ ಸಂಪೂರ್ಣವಾಗಿ ಭರವಸೆಯನ್ನಿಟ್ಟು ಮತ್ತು ನಂಬಿಕೆಯನ್ನಿಟ್ಟು ಆತನ ಉತ್ತರಕ್ಕಾಗಿ ಪ್ರಾರ್ಥಿಸಿ.

ನಿಮ್ಮ ಉದ್ದೇಶಗಳು ಪ್ರಾಮುಖ್ಯವಾಗಿದೆ. *"ನೀವು ಬೇಡಿದರೂ ಬೇಡಿದ್ದನ್ನು ನಿಮ್ಮ ಭೋಗಗಳಿಗಾಗಿ ಉಪಯೋಗಿಸಬೇಕೆಂಬ ದುರಭಿಪ್ರಾಯಪಟ್ಟು ಬೇಡಿಕೊಳ್ಳುವದರಿಂದ ನಿಮಗೆ ದೊರೆಯುವದಿಲ್ಲ,"* ಯಾಕೋಬ 4:3.

ಗಂಡಂದಿರೇ, ನಿಮ್ಮ ಹೆಂಡತಿಯೊಂದಿಗೆ ಸರಿಯಾಗಿ ನಡೆದುಕೊಳ್ಳಿರಿ. ಯೇಸು ಸಭೆಯನ್ನು ಪ್ರೀತಿಸಿ, ಅವಳನ್ನು ಪೋಷಿಸಿ, ಅವಳನ್ನು ತಿಳಿದುಕೊಂಡು, ಕೃಪೆಯ ಜೀವಿತದಲ್ಲಿ ಸರಿಸಮಾನ ಬಾಧ್ಯಸ್ಥಳಾಗಿ ಗೌರವಿಸುವ ಹಾಗೆಯೇ ಗಂಡನು ತನ್ನ ಹೆಂಡತಿಯನ್ನು ಪ್ರೀತಿಸಬೇಕೆಂದು ಸತ್ಯವೇದವು ಕಲಿಸಿಕೊಡುತ್ತದೆ, *"ಹೀಗೆ ನಡೆದರೆ ನಿಮ್ಮ ಪ್ರಾರ್ಥನೆಗಳಿಗೆ ಅಡ್ಡಿಯಿರುವದಿಲ್ಲ,"* 1 ಪೇತ್ರ 3:7.

ಇತರರನ್ನು ಕ್ಷಮಿಸಿರಿ. ನೀವು ಕ್ಷಮಿಸದೆ ಹೋದರೆ ಅದು ನಿಮ್ಮ ಪ್ರಾರ್ಥನೆಗೆ ಅಡ್ಡಿಪಡಿಸುತ್ತದೆ. ನೀವು ಇತರರನ್ನು ಕ್ಷಮಿಸುವಾಗ ನೀವು ದೇವರಿಂದ ನಿಮ್ಮ ಕ್ಷಮಾಪಣೆಗಾಗಿ ಎದುರುನೋಡಬಹುದು, ಮಾರ್ಕ 11:25, ಮತ್ತಾಯ 5:23-24, 6:12-15. ನೀತಿವಂತರಾಗಿರಿ.

ದೇವರ ಮುಂದೆ ಆತ್ಮೀಕವಾಗಿ ಶುದ್ಧೀಕರಿಸಿಕೊಳ್ಳಿರಿ ಮತ್ತು ನಂತರ ನಿಮ್ಮ ಪ್ರಾರ್ಥನೆಯು ಹೆಚ್ಚಿನದನ್ನು ಸಾಧಿಸುತ್ತದೆ. *"ಶಿಷ್ಟರ ಬಿನ್ನಪ ಆತನಿಗೆ ಒಪ್ಪಿತ,"* ಜ್ಞಾನೋಕ್ತಿ 15:8. ಆದಾಗ್ಯೂ, ಆತನ ಧರ್ಮಶಾಸ್ತ್ರವನ್ನು ಅನುಸರಿಸದಿದ್ದರೆ, *"ಧರ್ಮೋಪದೇಶಕ್ಕೆ ಕಿವಿಗೊಡದವನು ಮಾಡುವ ದೇವಪ್ರಾರ್ಥನೆಯೂ ಅಸಹ್ಯ,"* ಜ್ಞಾನೋಕ್ತಿ 28:9. ದೇವರು ನಿಮ್ಮನ್ನು ಕಾಪಾಡುತ್ತಾನೆ, ಸಿದ್ಧಗೊಳಿಸುತ್ತಾನೆ, ಮತ್ತು ಪರಿಪೂರ್ಣರನ್ನಾಗಿ ಮಾಡುತ್ತಾನೆ. ತಿರಸ್ಕಾರಗಳು ಮತ್ತು ತಡವಾದ ಕಾರ್ಯಗಳು ನಿಮ್ಮ ಒಳ್ಳೆಯದಕ್ಕಾಗಿದೆ.

ನೀವು ಕೇಳುವ ಸಂಗತಿಗಳಿಂದ ನಿಮಗೆ ತೊಂದರೆಯುಂಟಾಗುತ್ತದೆ ಎಂಬುದನ್ನು ನೀವು ಅರಿಯದಿರುವಾಗ ದೇವರು ನಿಮ್ಮ ಕಾಪಾಡುತ್ತಾನೆ. ನಿಮಗಿಂತ ಹೆಚ್ಚಿನದಾಗಿ ದೇವರು ನಿಮ್ಮನ್ನು ತಿಳಿದಿದ್ದಾನೆ. ಕೆಲವು ಬಾರಿ, ದೇವರು ನಿಮಗೆ ಇಲ್ಲ ಎಂದು ಹೇಳುತ್ತಾನೆ ಯಾಕಂದರೆ ಆತನು ನಿಮ್ಮ ಭವಿಷ್ಯವನ್ನು ಮತ್ತು ನಿಮಗೆ ಉತ್ತಮವಾದದ್ದು ಯಾವುದು ಎಂದು ತಿಳಿದಿದ್ದಾನೆ. ಕೆಲವು ಬಾರಿ ತಡಮಾಡುವುದರಿಂದ ಪ್ರಾರ್ಥನೆಗೆ ಆತನ ಉತ್ತರವನ್ನು ಪಡೆಯುವುದರಲ್ಲಿ ನಿಮ್ಮನ್ನು ಸಿದ್ಧಗೊಳಿಸುವುದಕ್ಕೆ ಸಮಯವನ್ನು ನೀಡಲಾಗುತ್ತದೆ. ಕೆಲವು ಬಾರಿ ಆತನಿಂದ ತಿರಸ್ಕಾರಗಳು ಮತ್ತು ತಡವಾದ ಕಾರ್ಯಗಳು ನಿಮ್ಮ ನಂಬಿಕೆಯನ್ನು ಬಲಪಡಿಸುವುದಕ್ಕಾಗಿ ಬರುತ್ತವೆ. ದೇವರ ಉತ್ತರಗಳನ್ನು ನಂಬಿಕೆ ಮತ್ತು ಕೃತಜ್ಞತೆಯಿಂದ ಅಂಗೀಕರಿಸಿ. ದೇವರು ಏನು ಮಾಡುತ್ತಿದ್ದಾನೆ ಎಂಬುದನ್ನು ಆತನು ತಿಳಿದಿದ್ದಾನೆ. ದೇವರೊಂದಿಗೆ ಮಾತನಾಡಿ. ಆತನು ಕೇಳುತ್ತಿದ್ದಾನೆ. ಪ್ರಾರ್ಥಿಸಿ!

**"ಎಲ್ಲಾದರಲ್ಲಿಯೂ ಕೃತಜ್ಞತಾಸ್ತುತಿಮಾಡಿರಿ; ಇದೇ ನಿಮ್ಮ ವಿಷಯವಾಗಿ ಕ್ರಿಸ್ತ ಯೇಸುವಿನಲ್ಲಿ ತೋರಿ ಬಂದ ದೇವರ ಚಿತ್ತ." 1 ಥೆಸಲೋನಿಕದವರಿಗೆ 5:18**

---

*ನಾನು ಹೇಗೆ ಪ್ರಾರ್ಥಿಸಬೇಕು?* © 2026 ಜಾನ್‌ಡಿ. ಮೊರಿಸ್ III ಆಕ್ಸ್ ಒನ್‌ಯೆಯಿಟ್ ರವರಿಂದ ಮುದ್ರಿಸಲಾಗಿದೆ. ನೀವು ಮುಕ್ತವಾಗಿ ಮುದ್ರಣ, ನಕಲು ಮಾಡಬಹುದು, ಅಂಚೆ, ಇಮೇಲ್‌ಅಥವಾ ಸಂದೇಶವನ್ನು ಪೂರ್ಣವಾಗಿ ಒಳಗೊಂಡಿರುವ ಹೇಳಿಕೆಗಳಲ್ಲಿ ಯಾವುದೇ ವಿಷಯಗಳನ್ನು ಬದಲಾಯಿಸದೆ ಕಳುಹಿಸಬಹುದು. ನೀವು ನಿಮ್ಮ ಸೇವೆಯ ಅಥವಾ ಸಭೆಯ ಹೆಸರನ್ನು ಅಥವಾ ಚಿಹ್ನೆಯನ್ನು ಮೊಲದ ಪುಟದ ಮೇಲ್ಭಾಗದಲ್ಲಿ ಸೇರಿಸಬಹುದು ಮತ್ತು ನಿಮ್ಮ'ನ್ನು ಸಂಪರ್ಕಿಸಬಹುದಾದ ಮಾಹಿತಿಯನ್ನು ಪುಟ 2 ರ ಕೆಳಭಾಗದ ದಪ್ಪನೆಯ ಸಾಲಿನ ಮೇಲೆ ಬರೆಯಿರಿ. Prayer316 ಎಂಬುದು ಕೇವಲ ಸತ್ಯವೇದ ಆಧಾರಿತವಾಗಿದೆ. ಇದು ಜನರು ಪ್ರಾರ್ಥಿಸಲು ಮತ್ತು ದೇವರೊಂದಿಗೆ ತಮ್ಮ ಸಂಬಂಧದಲ್ಲಿ ಬೆಳೆಯಲು ಇರುತ್ತದೆ. ನೀವು ಆಕ್ಸ್ ಒನ್‌ಯೆಯಿಟ್ ಗೆ (ಸಾಧ್ಯವಾದರೆ ಆಂಗ್ಲ ಭಾಷೆಯಲ್ಲಿ) ಇಮೇಲನ್ನು ಕಳುಹಿಸಿ: *Hello@Mail316.org*. ಭಾಷಾಂತರ ಸೇವೆಗಳನ್ನು www.ChristianLingua.com. ರಿಂದ ಒದಗಿಸಲಾಗಿದೆ. *ನಾನು ಹೇಗೆ ಪ್ರಾರ್ಥಿಸಬೇಕು?* 48 ಭಾಷೆಗಳಲ್ಲಿ ಉಚಿತವಾಗಿ *www.Sacrifice316.org*. ರಲ್ಲಿ ಲಭ್ಯವಿದೆ. ಆಂಗ್ಲ ಭಾಷೆಯಲ್ಲಿನ ಹೇಳಿಕೆಗಳನ್ನು The Lockman Foundation's New American Standard Bible 1995 ರಿಂದ ತೆಗೆದುಕೊಳ್ಳಲಾಗಿದೆ. ಈ ಭಾಷಾಂತರದಲ್ಲಿರುವ ಸತ್ಯವೇದದ ಹೇಳಿಕೆಗಳನ್ನು ಇದರಿಂದ ತೆಗೆದುಕೊಳ್ಳಲಾಗಿದೆ: BSI JV